ನವೆಂಬರ್ 26, 2008

**“ಜಗತ್ ಗುರು ಶ್ರೀ ನಾರಾಯಣ ಗುರುದೇವ್” – 5 ರೂಪಾಯಿ ಹೊಸ ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್) ನಾಣ್ಯ**

“ಜಗತ್ ಗುರು ಶ್ರೀ ನಾರಾಯಣ ಗುರುದೇವ್” ಸ್ಮರಣಾರ್ಥ ಭಾರತ ಸರ್ಕಾರವು ನೀಡುತ್ತಿರುವ ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್) 5 ರೂಪಾಯಿಗಳ ಹೊಸ ನಾಣ್ಯಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಚಲಾವಣೆಗೆ ಬಿಡುಗಡೆ ಮಾಡಲಿದೆ.

ಈ ನಾಣ್ಯಗಳ ಗಾತ್ರ, ವಿನ್ಯಾಸ, ಮತ್ತು ಸಂರಚನೆಯ ವಿವರ ಹೀಗಿದೆ:

| **ನಾಣ್ಯದ ಮೌಲ್ಯವರ್ಗ** | **ಆಕಾರ, ತೂಕ ಮತ್ತು ಹೊರಸುತ್ತಳತೆ** | **ಲೋಹಾಂಶ** |
|---|---|---|
| ಐದು ರೂಪಾಯಿಗಳು | ವೃತ್ತಾಕಾರ 23 ಮಿಮಿ<br>ಸುರಕ್ಷತಾ ಅಂಚಿನೊಡನೆ. ತೂಕ 6 ಗ್ರಾಂ | ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್<br>ಕ್ರೋಮಿಯಮ್ – 17%<br>ಕಬ್ಬಿಣ – 83% |

**ವಿನ್ಯಾಸ:**

**ಮುಂಭಾಗ:**

ನಾಣ್ಯದ ಮುಖ ಭಾಗವು **‘सत्यमेव जयते’** ಎಂಬ ಕೆಳಬರಹದೊಂದಿಗೆ ಅಶೋಕ ಸ್ತಂಭದ ಸಿಂಹದ ತಲೆಯನ್ನು ಹಾಗೂ ಮೇಲಿನ ಎಡಭಾಗದಲ್ಲಿ **‘भारत’** ಎಂಬ ಹಿಂದಿ ಪದವನ್ನು ಹಾಗೂ ಬಲಭಾಗದಲ್ಲಿ “INDIA” ಎಂಬ ಇಂಗ್ಲಿಷ್ ಪದವನ್ನು ಹೊಂದಿರುವುದು. ಸಿಂಹದ ತಲೆಯ ಕೆಳಭಾಗದಲ್ಲಿ ನಾಣ್ಯದ ಮೌಲ್ಯವಾದ “5” ಎಂದು ಅಂತರರಾಷ್ಟ್ರೀಯ ಸಂಖ್ಯೆಗಳಲ್ಲಿ ಬರೆದಿರುವುದು ಮತ್ತು ಕೆಳ ಎಡಭಾಗದಲ್ಲಿ **“रुपये”** ಎಂದು ಹಿಂದಿಯಲ್ಲಿ ಮತ್ತು ಬಲಭಾಗದಲ್ಲಿ “Rupees” ಎಂದು ಇಂಗ್ಲಿಷ್‌ನಲ್ಲಿ ಬರೆದಿರುವುದು. ನಾಣ್ಯದ ಅಂಚಿನಲ್ಲಿ 72(ಎಪ್ಪತ್ತೆರಡು) ಚುಕ್ಕಿಗಳಿರುತ್ತವೆ.

**ಹಿಂಭಾಗ :**

ಐದು ರೂಪಾಯಿ ನಾಣ್ಯದ ಹಿಂಭಾಗವು “ಜಗತ್ ಗುರು ಶ್ರೀ ನಾರಾಯಣ ಗುರುದೇವ್” ಅವರ ಭಾವಚಿತ್ರವನ್ನು ಹೊಂದಿದ್ದು ಮೇಲಿನ ಎಡಭಾಗದ ಅಂಚಿನಲ್ಲಿ “जगतगुरु श्री नारायणा गुरुदेव” ಎಂದು ಹಿಂದಿಯಲ್ಲಿ, ಮೇಲಿನ ಬಲ ಭಾಗದ ಅಂಚಿನಲ್ಲಿ “JAGAT GURU SREE NARAYANA GURUDEV” ಎಂದು ಇಂಗ್ಲಿಷ್‌ನಲ್ಲಿ ಅಕ್ಷರಗಳನ್ನು ಹೊಂದಿರುತ್ತವೆ. ನಾಣ್ಯದ ಅಂಚಿನಲ್ಲಿ 72(ಎಪ್ಪತ್ತೆರಡು) ಚುಕ್ಕಿಗಳಿರುತ್ತವೆ.

**5 ರೂಪಾಯಿಗಳ ಸುರಕ್ಷತಾ ಅಂಚು:**

ಐದು ರೂಪಾಯಿ ನಾಣ್ಯದ ಸುತ್ತಲಿನ ಭಾಗವು ಸುರಕ್ಷತಾ ಅಂಚನ್ನು ಹೊಂದಿರುವುದು. ಅಂಚಿನ ಮಧ್ಯಭಾಗವು ಅಲ್ಪ ಕೊರಕಲನ್ನು ಹೊಂದಿದ್ದು, ಖಾಲಿ ಜಾಗದಿಂದ ಪ್ರತ್ಯೇಕಿಸಲ್ಪಟ್ಟ ಎರಡು ಭಾಗಗಳ ಮಧ್ಯದಲ್ಲಿ ವಿನ್ಯಾಸವನ್ನು ಹೊಂದಿದೆ.

ಈ ವಿನ್ಯಾಸವು ಮಣಿಗಳ ಮಾಲೆಯ ರೂಪದಲ್ಲಿರುವುದು ಮತ್ತು ಮಣಿಗಳ ಮಧ್ಯೆ ಉಬ್ಬುಗಳಿರುತ್ತವೆ ಮತ್ತು ಪ್ರತಿ ಮಣಿಯೂ ತನ್ನ ಹಿಂಭಾಗದಲ್ಲಿ ಇರುವ ಉಬ್ಬಿನಲ್ಲಿ ಒಂದು ಗೆರೆಯನ್ನು ಹೊಂದಿರುತ್ತದೆ. ಒಟ್ಟು 30 ಗೆರೆಗಳು ಹಾಗೂ 30 ಮಣಿಗಳನ್ನು ಹೊಂದಿರುತ್ತದೆ.

1906ರ ನಾಣ್ಯ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿದಂತೆ ಐದು ರೂಪಾಯಿ ನಾಣ್ಯವು ಶಾಸನಬದ್ಧ ನೀಡಿಕೆಯಾಗಿದೆ. ಹಾಲಿ ಇರುವ ಐದು ರೂಪಾಯಿ ನಾಣ್ಯಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ : 2008 – 2009 / 773